ದಿವಾಣಿ ಹಾಗೂ ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ಸಿರುಗುಪ್ಪ

<u>ಸಿ. ಸಿ. ನಂ.**1731-2024**</u>

<u>ದಿನಾಂಕ **19** ನೇ ಜೂನ್ **2025**</u>

<u>ಪಿರ್ಯಾದಿಃ</u> 1) ಕರ್ನಾಟಕ ಸರ್ಕಾರ

ವಿರುದ್ದಃ

<u>ಆರೋಪಿಃ</u> ಗಂಗಾಧರ ಬಿನ್ ರಾಮಣ್ಣ,
ವಯಸ್ಸುಃ 23 ವರ್ಷ,
ವಾಸಃ ದೇವಿನಗರ ಕ್ಯಾಂಪ್,
ಸಿರುಗುಪ್ಪ ತಾಃ ಬಳ್ಳಾರಿ ಜಿಲ್ಲೆ.

<u>ದೋಷಾರೋಪಣೆ</u>

ನಾನು ಅಶೋಕ್ ಆರ್. ಹೆಚ್., ಎಲ್.ಎಲ್.ಎಂ. ದಿವಾಣಿ ಹಾಗೂ ಪ್ರ.ದ.ನ್ಯಾದಂ.ಗಳ ನ್ಯಾಯಾಧೀಶರು, ಸಿರುಗುಪ್ಪ, ನಿಮ್ಮ ಮೇಲೆ ದೋಷಾರೋಪಣೆಯನ್ನು ಹೊರೆಸುವುದೇನೆಂದರೇ,

1) ಬಳ್ಳಾರಿ ಜಿಲ್ಲೆ, ಸಿರುಗುಪ್ಪ ತಾಲ್ಲೂಕಿನ ತೆಕ್ಕಲಕೋಟೆ ಪಟ್ಟಣದಿಂದ ದೇವಿನಗರ ಕ್ಯಾಂಪ್‌ಗೆ ಹೋಗುವ ಮಾರ್ಗ ಮಧ್ಯದಲ್ಲಿ ಬರುವ ಕೆ ಇ ಬಿ ಹತ್ತಿರ ಕರ್ನಾಟಕ ಲೋಕಸಭೆ ಚುನಾವಣಾ-2024 ರ ನೀತಿ ಸಂಹಿತೆ ಜಾರಿ ಇದ್ದರೂ ಲೆಕ್ಕಿಸದೇ ಆರೋಪಿಯಾದ ನೀವು ದಿನಾಂಕ 16.04.2024 ರಂದು ನಿಮ್ಮ ಕೆಂಪು ಮಿಶ್ರಿತ ಬೂದು ಬಣ್ಣದ ಹೋಂಡಾ ಶೈನ್ ನೊಂದಣಿ ಸಂಖ್ಯೆ ಕೆಎ 34 ಇಕೆ 3045 ನೇದ್ದರ ಮುಂಭಾಗದಲ್ಲಿ ಬಿಳಿ ಬಣ್ಣದ ಚೀಲದಲ್ಲಿ ಯಾವುದೇ ಪರವಾನಗಿ/ಲೈಸನ್ಸ್ ಇಲ್ಲದೇ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲಗಳಲ್ಲಿ ಅಕ್ರಮವಾಗಿ ವಿವಿಧ ಬ್ರಾಂಡ್ ಗಳ ಒಟ್ಟು 17.100 ಲೀಟರ್ ಮದ್ಯವನ್ನು ಅಕ್ರಮವಾಗಿ ನಿಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡು ಯಾವುದೇ ಅನುಮತಿ ಇಲ್ಲದೆ ಅಕ್ರಮವಾಗಿ ಮಾರಾಟ ಮಾಡಲು, ಸಾಗಾಣಿಕೆ ಮಾಡುವ ಉದ್ದೇಶ ಹೊಂದಿದ್ದು, ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 11, 13, 14, 15 ಗಳನ್ನು ಉಲ್ಲಂಘಿಸಿ, ಆ ಮೂಲಕ ಕಲಂ 32 ರ ಕರ್ನಾಟಕ ಅಬಕಾರಿ ಕಾಯ್ದೆ 1965 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ತಮ್ಮ ಮೇಲೆ ಆಪಾದನೆ ಹೊರಿಸಲಾಗಿದೆ.

2) ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿಯಾದ ನೀವು ಮುಟ್ಟುಗೋಲು ಹಾಕಿಕೊಳ್ಳತಕ್ಕ ಮದ್ಯವನ್ನು ಸ್ವಾದೀನದಲ್ಲಿ ಇಟ್ಟುಕೊಂಡು ಕಾನೂನು ಬಾಹಿರವಾಗಿ ಸಾಗಾಟ ಮಾಡಿ ಆ ಮೂಲಕ ಕಲಂ 38ಎ ಕರ್ನಾಟಕ ಅಬಕಾರಿ ಕಾಯ್ದೆ 1965 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ತಮ್ಮ ಮೇಲೆ ದೋಷಾರೋಪಣೆ ಹೊರಿಸಲಾಗಿದೆ.

ಸದರಿ ಮೇಲ್ಕಂಡ ದೋಷಾರೋಪಣೆಗಳು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುತ್ತದೆ.

ಪ್ರಶ್ನೆ 1) ಸದರಿ ದೋಷಾರೋಪಣೆ ಓದಿ ಹೇಳಿದ್ದು ಅರ್ಥವಾಯಿತೇ?

ಉತ್ತರ

ಪ್ರಶ್ನೆ 2) ಸದರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ?

ಉತ್ತರ

ಪ್ರಶ್ನೆ 3) ಸದರಿ ದೋಷಾರೋಪಣೆಗಳ ವಿಚಾರಣೆಯಾಗಬೇಕೆ?

ಉತ್ತರ

(ಮೇಲ್ಕಂಡ ಆಪಾದನೆಯನ್ನು ಆರೋಪಿತನಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ ನಂತರ ಆರೋಪಿ ನೀಡಿದ ಉತ್ತರವನ್ನು ಬರೆದುಕೊಂಡು ಸರಿಯಾಗಿದೆ ಎಂದು ದೃಡೀಕರಿಸಿದೆ)

**( ಅಶೋಕ್ ಆರ್. ಹೆಚ್. )**
ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಧೀಶರು,
ಸಿರುಗುಪ್ಪ

ಆರೋಪಿ ಸಹಿ.